






ನಿರ್ಮಾಣವಾಗಿದೆ ಎಂದು ಇತಿಹಾಸ ಹೇಳುತ್ತದೆ. ಗಟ್ಟಿ ಕಲ್ಲಿನಿಂದ ನಿರ್ಮಿಸಲ್ಪಟ್ಟ ಆಧಾರ ಸ್ತಂಭಗಳು ಮತ್ತು ನಾಲ್ಕೂ ಮೂಲೆಯಲ್ಲಿನ ಕಲ್ಲು ಗೋಡೆಗಳಿಂದಾಗಿ ದೇಗುಲ ಸುಭದ್ರವಾಗಿದೆ. ಹಿಂದೆ ಇದು ಮುಕುಟೇಶ್ವರ ಎಂಬ ಹೆಸರು ಪಡೆದಿತ್ತು. ದೇಗುಲ ಮಂಟಪದಲ್ಲಿ ಒಂದು ಶಾಸನವಿದ್ದು, ಇದರಲ್ಲಿ ವಿಜಯಾದಿತ್ಯನ ಉಪಪತ್ನಿ ಮಹಾಕೂಟೇಶ್ವರನಿಗೆ ರತ್ನಪೀಠ, ಬೆಳ್ಳಿ ಛತ್ರಿ ಮತ್ತು ಭೂಮಿ ದಾನ ಮಾಡಿದ ಉಲ್ಲೇಖಗಳಿವೆ.

ಮಲ್ಲಿಕಾರ್ಜುನ ಎರಡನೆಯ ದೊಡ್ಡ ದೇಗುಲ. ಇಲ್ಲಿ ನಾಲ್ಕರಿಂದ ಐದು ಅಡಿ ಎತ್ತರದ ಈಶ್ವರ ಲಿಂಗವಿದೆ. ದೇಗುಲದ ಗೋಡೆಗಳು ಮತ್ತು ಕಂಬಗಳ ಮೇಲೆ ಚಿತ್ರ ಕೆತ್ತನೆಗಳಿವೆ. ನಾಗರಶೈಲಿಯ ಶಿಖರವನ್ನು ದೇಗುಲ ಹೊಂದಿದೆ. ಎದುರಿಗೆ ಸುಂದರ ಸರಸ್ವತಿ ದೇಗುಲವಿದ್ದು, ಇಲ್ಲಿ ದೇವಿಯ ನಾಲ್ಕು ಕೈಗಳಲ್ಲಿ ಪಾಶ, ಅಂಕುಶ, ಪುಸ್ತಕ ಮತ್ತು ಅಭಯ ಮುದ್ರೆಗಳಿವೆ. ಇನ್ನುಳಿದ ಸಣ್ಣ ದೇಗುಲಗಳಲ್ಲಿ ಗಣೇಶ, ವೀರಭದ್ರೇಶ್ವರ, ಶಿವಲಿಂಗ, ಮುಂತಾದ ವಿಗ್ರಹಗಳಿವೆ. ಲಿಂಗ ಮತ್ತು ಎದುರಿಗೆ ನಂದಿ ಮೂರ್ತಿಗಳು ಹೆಚ್ಚಾಗಿವೆ.

ದೇಗುಲ ಸಂಕೀರ್ಣದ ಒಳಗೆ ಕಾಲಿಟ್ಟರೆ ಮೊದಲು ಸಿಗುವುದು ಗಣೇಶ ಹೊಂಡ. ಚೌಕಾಕಾರದ ಪುಟ್ಟ ಹೊಂಡದಲ್ಲಿನ ಕಲ್ಲು ಗಣೇಶನ ಮೂರ್ತಿ ಅತ್ಯಂತ ಸುಂದರವಾಗಿದೆ. ಹೊಂಡದ ಮೇಲಿನ ಕಟ್ಟೆಗೆಯ ಪಟ್ಟಿಗೆ ಪುಟ್ಟ ತೊಟ್ಟಿಲು ಕಟ್ಟಲಾಗಿದೆ. ತೊಟ್ಟಿಲಿನಲ್ಲಿನ ಸ್ವರ್ಣವರ್ಣದ ಗಣಪನನ್ನು ತೂಗುವುದು ವಾಡಿಕೆ. ಸಂಕೀರ್ಣದ ಆವರಣದೊಳಗೆ ಹೋಗುವ ಮುನ್ನ ಗಣೇಶ ಹೊಂಡದ ನೀರಿನಿಂದ ಪವಿತ್ರರಾಗಬೇಕೆಂಬುದು ಆಸ್ತಿಕರ ನಂಬಿಕೆ. ಗಣೇಶ ಹೊಂಡಕ್ಕೆ ಕಾಶೀತೀರ್ಥ ಎಂಬ ಹೆಸರಿದೆ.

## ನೀರಿನ ಚಿಲುಮೆ ವಿಷ್ಣು ಪುಷ್ಕರಣಿ:

ದೇಗುಲ ಆವರಣದ ಒಳಗೆ ಹೋದರೆ ನಡುವೆ ಪುಷ್ಕರಣಿ ಇದೆ. ಅದಕ್ಕೆ ವಿಷ್ಣು ಪುಷ್ಕರಣಿ ಎಂಬ ಹೆಸರು. ಸದಾ ಹರಿಯುವ ನೀರಿನ ಚಿಲುಮೆ ಇದು. ಈಜುಕೊಳದ ಆಕಾರದಲ್ಲಿನ ಚಿಲುಮೆಯ ಒಂದು ಮೂಲೆಯಲ್ಲಿ ಈಶ್ವರ